2275(2944) ಶ್ರೀ ಬಸವರಾಜು ಎ.ಎಸ್. (ಅರಸೀಕರೆ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆ, ಅರಸೀಕೆರೆಯಲ್ಲಿರುವ ಸಾರಿಗೆ ಡಿಪೋ ಘಟಕವು ಈ ಹಿಂದೆ ಹಾಸನ ವಿಭಾಗಕ್ಕೆ ಸೇರಿದ್ದು ನಿಜವೇ;

ಆ) ಹಾಗಿದ್ದಲ್ಲಿ ಇದನ್ನು ಹಾಸನದಿಂದ ಚಿಕ್ಕಮಂಗಳೂರಿಗೆ ಬದಲಾವಣೆ ಮಾಡಲು ಕಾರಣಗಳೇನು;

ಇ) ತಾಂತ್ರಿಕವಾಗಿ, ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಅರಸೀಕೆರೆ ಹಾಸನಕ್ಕೆ ಹತ್ತಿರವಿರುವ ಕಾರಣ ಇದನ್ನು ಪುನ: ಹಾಸನ ವಿಭಾಗಕ್ಕೆ ಸೇರಿಸಲು ಸರ್ಕಾರ ಪರಿಗಣಿಸುವುದೆ;

ಈ) ಈ ಬಗ್ಗೆ ಸರ್ಕಾರದ ಕ್ರಮಗಳೇನು;

ಉ) ಅರಸೀಕೆರೆ ಗ್ರಾಮಾಂತರ ಪ್ರದೇಶದಲ್ಲಿ ಕ್ರಮಿಸುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು ಹಾಗೂ ಸುತ್ತುವಳಿ ಮಾರ್ಗಗಳೆಷ್ಟು;

ಊ) ಕಳೆದ ಎರಡು ವರ್ಷಗಳಿಂದ ಈ ವರ್ಷ ಗ್ರಾಮಾಂತರದ ಎಷ್ಟು ಮಾರ್ಗದ ಸುತ್ತು ವಳಿಗಳನ್ನು ರದ್ದುಪಡಿಸಲಾಗಿದೆ;

ಋ) ಇದಕ್ಕೆ ಕಾರಣಗಳೇನು ಹಾಗೂ ಪುನ: ಯಾವಗ ಮಾರ್ಗದಲ್ಲಿ ಮತ್ತು ಸುತ್ತುವಳಿಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):-

ಅ) ಹೌದು.

ಆ) ಹಾಸನ ವಿಭಾಗದಲ್ಲಿ ಅನುಸೂಚಿಗಳ ಸಂಖ್ಯೆ ಹೆಚ್ಚಿದಂತೆ ವಿಭಾಗದ ಕಾರ್ಯಾಚರಣೆಯ ಮಟ್ಟವನ್ನು ಹಾಗೂ ಹತೋಟಿಯನ್ನು ಉತ್ತಮಪಡಿಸಬೇಕಾದ ಅಗತ್ಯತೆ ಮೇರೆಗೆ ಹಾಸನ ವಿಭಾಗವನ್ನು ಹಾಸನ ಮತ್ತು ಚಿಕ್ಕಮಗಳೂರು ವಿಭಾಗಗಳಾಗಿ ಇಬ್ಭಾಗಿಸಲಾಯಿತು. ಚಿಕ್ಕಮಗಳೂರು ವಿಭಾಗವನ್ನು ಆರ್ಥಿಕವಾಗಿ ಸದೃಢಗೊಳಿಸಲು ಅರಸೀಕೆರೆ ಘಟಕವನ್ನು ಚಿಕ್ಕಮಗಳೂರು ವಿಭಾಗಕ್ಕೆ ಸೇರಿಸಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) 64 ಬಸ್ಸುಗಳು, 398 ಸುತ್ತುವಳಿಗಳು.

ಊ) ಎರಡು

ಋ) ಸಾರಿಗೆ ಆದಾಯದ ಕೊರತೆ, ಸದ್ಯಕ್ಕೆ ಪ್ರಾರಂಭಿಸುವ ಪ್ರಸ್ತಾವನೆ ಇಲ್ಲ.

2276(2789) ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?